ಜನಾರೋಗ್ಯ ಆಂದೋಲನ – ಕರ್ನಾಟಕ

**JANAAROGYA ANDOLANA KARNATAKA (JAAK)**

**ಸರ್ವರಿಗೂ ಆರೋಗ್ಯ ಇಂದೇ ಎಂಬ ಗುರಿಯತ್ತ ಜನರ ಆರೋಗ್ಯ ಚಳುವಳಿ!!**


# ಕರ್ನಾಟಕ ಜನತೆಯ ಆರೋಗ್ಯಕ್ಕಾಗಿನ ಹಕ್ಕೊತ್ತಾಯಗಳು

1. **ಸಂವಿಧಾನಕ್ಕೆ ತಿದ್ದುಪಡಿ**

   ಸಂವಿಧಾನಕ್ಕೆ ತಿದ್ದುಪಡಿ ತರುವ ಮೂಲಕ ಆರೋಗ್ಯದ ಹಕ್ಕನ್ನು ಕಡ್ಡಾಯವಾಗಿ ಪಾಲಿಸಲೇಬೇಕಾದ ಮೂಲಭೂತ ಹಕ್ಕನ್ನಾಗಿ ಮಾಡಲು ಪೂರಕವಾದ ಮಸೂದೆಯನ್ನು ಪ್ರಕಟಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು.

2. **ಸಾರ್ವಜನಿಕ ಆರೋಗ್ಯ ಕಾಯ್ದೆ**

   ಆರೋಗ್ಯದ ಹಕ್ಕನ್ನು ಕಡ್ಡಾಯವಾಗಿ ಕಾರ್ಯಗತಗೊಳಿಸುವತ್ತ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ (KFSA) ಶಿಫಾರಸ್ಸಿನ ಪ್ರಕಾರ ಕರ್ನಾಟಕ ರಾಜ್ಯ **ಸಾರ್ವಜನಿಕ ಆರೋಗ್ಯ ಕಾಯ್ದೆಯನ್ನು** ತುರ್ತಾಗಿ ಜಾರಿಗೊಳಿಸಬೇಕು

3. **ಉಚಿತ, ಉತ್ತಮ ಗುಣಮಟ್ಟದ ಮತ್ತು ಸಮಗ್ರ ಸೇವೆಗಳು**

   "ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ"ದಲ್ಲಿ ಸೂಚಿಸಿರುವಂತೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ **ಉಚಿತ, ಉತ್ತಮ ಗುಣಮಟ್ಟದ ಮತ್ತು ಸಮಗ್ರ ಸೇವೆಗಳನ್ನು ಒದಗಿಸಬೇಕು** (ಅದರಲ್ಲೂ ವಿಶೇಷ ಅಗತ್ಯವುಳ್ಳ ಸಮುದಾಯಗಳಾದ ದಲಿತರು, ಬುಡಕಟ್ಟು ಜನಾಂಗ, ಗ್ರಾಮೀಣ ಜನರು, ಮಹಿಳೆಯರು, ಅಂಗವಿಕಲತೆಯ ಜನರು, HIV/AIDS ಭಾದಿತರು ಮತ್ತು ಇತರ ಶೋಷಿತ ಜನಸಮುದಾಯಗಳಿಗೆ ಆದ್ಯತೆ ಸಿಗಬೇಕು)

4. **ಆರೋಗ್ಯಕ್ಕಾಗಿನ ಸರ್ಕಾರಿ ಅನುದಾನದ ಹೆಚ್ಚಳ:**

   ರಾಜ್ಯದ ಒಟ್ಟು ಆದಾಯದಲ್ಲಿ ಆರೋಗ್ಯಕ್ಕೆ ಅನುದಾನವನ್ನು ಪ್ರಸ್ತುತ ಇರುವ (2007–2008ರಲ್ಲಿ) 3.37%ಯಿಂದ 10%ಗೆ ತುರ್ತಾಗಿ ಹೆಚ್ಚಿಸಬೇಕು. ಅದೇ ಸಮಯದಲ್ಲಿ ಆರೋಗ್ಯಕ್ಕಾಗಿನ ಅನುದಾನವನ್ನು ಸಂಪೂರ್ಣವಾಗಿ ಬಳಸಿಕೊಳ್ಳುವಂತೆ ಆರೋಗ್ಯ ವ್ಯವಸ್ಥೆಯ ಕಾರ್ಯಾಂಗದ ದಕ್ಷತೆಯನ್ನು ಹೆಚ್ಚಿಸಬೇಕು.

5. **ಗ್ರಾಮೀಣ ಆರೋಗ್ಯ ಪಾಲನೆಯ ಅನುದಾನ 30%ಕ್ಕೆ ಹೆಚ್ಚಿಸಿ**

   ಗ್ರಾಮೀಣ ಜನರ ಪ್ರಾಥಮಿಕ ಆರೋಗ್ಯ ಪಾಲನೆಗಾಗಿ (ಉಪಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ,, ತಾಲ್ಲೂಕು ಆಸ್ಪತ್ರೆ ಇವೆಲ್ಲವನ್ನೂ ಒಳಗೊಂಡಂತೆ) ಹಾಗೂ ನೆನೆಗುದಿಗೆ ಬಿದ್ದಿರುವ ಗ್ರಾಮೀಣ ಆರೋಗ್ಯ ವ್ಯವಸ್ಥೆಯ ಪುನಶ್ಚೇತನಕ್ಕಾಗಿ, ಸರ್ಕಾರ ತನ್ನ ಒಟ್ಟು ಆರೋಗ್ಯದ ಅನುದಾನದಲ್ಲಿ ಅದಕ್ಕೆ ಕೊಡುತ್ತಿರುವ ಈಗಿನ 3% ಭಾಗವನ್ನು ಕನಿಷ್ಠ 30% ಗೆ ಹೆಚ್ಚು ಮಾಡಬೇಕು. National Commission on Macroeconomics and Healthನ ಪ್ರಕಾರ ನಮ್ಮ ರಾಜ್ಯದ ಗ್ರಾಮೀಣ ಆರೋಗ್ಯ ವ್ಯವಸ್ಥೆಯನ್ನು ಉತ್ತಮವಾಗಿ ನಡೆಸಲು ಬೇಕಾಗಿರುವ ವಾರ್ಷಿಕ **1023.20** ಕೋಟಿ ರೂಪಾಯಿಗಳನ್ನು ತಕ್ಷಣವೇ ಜಾರಿಗೊಳಿಸಬೇಕು.

6. **ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಪುನಶ್ಚೇತನ:**

   ಕರ್ನಾಟಕ ರಾಜ್ಯದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಭಾರತ ಸರ್ಕಾರವು ಹೊರತಂದಿರುವ ಭಾರತೀಯ ಸಾರ್ವಜನಿಕ ಆರೋಗ್ಯ ಮಾನದಂಡಗಳ ಪ್ರಕಾರ ಕಾರ್ಯಗೊತಗೊಳಿಸಬೇಕು ಹಾಗೂ ಈ ನಿಟ್ಟಿನಲ್ಲಿ ಕೆಳಗಿನ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಬೇಕು:

   - **ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು** (ಸುಸಜ್ಜಿತ ಕಟ್ಟಡ, ಶೌಚಾಲಯ, ನೀರು, ವಿದ್ಯುತ್ ಇತ್ಯಾದಿ)
   - **"ಭಾರತೀಯ ಸಾರ್ವಜನಿಕ ಆರೋಗ್ಯ ಮಾನದಂಡ"** ಆಧಾರದಲ್ಲಿ ಗ್ರಾಮೀಣ ಆರೋಗ್ಯ ವ್ಯವಸ್ಥೆಯನ್ನು ಯಶಸ್ವಿಯಾಗಿ ನಿರ್ವಹಿಸಲು ಬೇಕಿರುವ ಒಟ್ಟು ಸಿಬ್ಬಂದಿಯ ಸಂಖ್ಯೆ: **64811.** ತಕ್ಷಣವೇ ಈ ಪೂರ್ಣಪ್ರಮಾಣದ ಸಿಬ್ಬಂದಿ ನೇಮಕಾತಿ ಮಾಡಬೇಕು.
   - **ಗುತ್ತಿಗೆ ಸಿಬ್ಬಂದಿ** ನೇಮಕಾತಿಯ ಪದ್ಧತಿ ರದ್ದು ಮಾಡಿ ಪೂರ್ಣಪ್ರಮಾಣದ ಸಿಬ್ಬಂದಿ ನೇಮಕಾತಿ ಮಾಡಬೇಕು. ಈಗಾಗಲೇ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಕೂಡಲೇ ಖಾಯಂ ಗೊಳಿಸುವತ್ತ ಕ್ರಮ ಕೈಗೊಳ್ಳಬೇಕು

- **ಔಷಧಿಗಳ ಮೇಲಿನ ಅನುದಾನವನ್ನು ಹೆಚ್ಚಿಸಬೇಕು**
  - ಉಪಕೇಂದ್ರಕ್ಕೆ ವಾರ್ಷಿಕ ಸರಾಸರಿ 5,650 ರೂ.ಗಳಿಂದ 18,000 ರೂ.ಗಳಿಗೆ ಹೆಚ್ಚಿಸಬೇಕು
  - ಪ್ರಾ.ಆ.ಕೇಂ.ಕ್ಕೆ ವಾರ್ಷಿಕ ಸರಾಸರಿ 75,000 ರೂ.ಗಳಿಂದ 3,00,000 ರೂ.ಗಳಿಗೆ ಹೆಚ್ಚಿಸಬೇಕು
  - ಸ.ಆ.ಕೇಂ.ಕ್ಕೆ ವಾರ್ಷಿಕ ಸರಾಸರಿ 1,25,000 ರೂಗಳಿಂದ 10,00,000 ರೂಗಳಿಗೆ ಹೆಚ್ಚಿಸಬೇಕು (ಮೂಲ : National Commission on Macroeconomics and Health)
- ಆರೋಗ್ಯ ಇಲಾಖೆಯನ್ನು ಕಬಳಿಸಿರುವ **ಭ್ರಷ್ಟಾಚಾರವನ್ನು ಆಮೂಲಾಗ್ರವಾಗಿ ನಿವಾರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು.**
- **ಆರೋಗ್ಯ ಸಿಬ್ಬಂದಿಗೆ ಉತ್ತೇಜಕರ ವಾತಾವರಣ** ನಿರ್ಮಾಣ ಮಾಡುವತ್ತ ಬೇಕಾದ ಸೌಲಭ್ಯಗಳನ್ನು (ವಸತಿ ಗೃಹಗಳು, ಉನ್ನತ ಮತ್ತು ಮುಂದುವರಿಕೆ ಶಿಕ್ಷಣ, ಮುಂಬಡ್ತಿ , ವೇತನ ಪರಿಷ್ಕರಣೆ, ಇತರೆ) ಒದಗಿಸಬೇಕು.

7. **ಖಾಸಗಿ ಕ್ಷೇತ್ರದ ನಿಯಂತ್ರಣ:**
ಖಾಸಗಿ ಆರೋಗ್ಯ ಸೇವೆಗಳನ್ನು ಮತ್ತು ಅವುಗಳ ಗುಣಮಟ್ಟ ಮತ್ತು ಶುಲ್ಕಗಳನ್ನು ನಿಯಂತ್ರಣಗೊಳಿಸಬೇಕು ಮತ್ತು ಇದನ್ನು ಕರ್ನಾಟಕ ರಾಜ್ಯ ಸಾರ್ವಜನಿಕ ಆರೋಗ್ಯ ಕಾಯ್ದೆಯಡಿಯಲ್ಲಿ ತರಬೇಕು.

8. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿನ ಎಲ್ಲಾ ರೀತಿಯ **ಖಾಸಗೀಕರಣವನ್ನು** (ಗುತ್ತಿಗೆ, ಹೊರಗುತ್ತಿಗೆ ಇತ್ಯಾದಿ) **ಕೂಡಲೇ ರದ್ದುಗೊಳಿಸಬೇಕು** ಮತ್ತು ಈಗಾಗಲೇ ಖಾಸಗೀಕೃತಗೊಂಡಿರುವ ಸೇವೆಗಳನ್ನು ಹಿಂತೆಗೆದುಕೊಳ್ಳಬೇಕು.

9. **ನಗರ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಸೇವೆಗಳು**
ನಗರ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಪ್ರಾರಂಭಿಸಬೇಕು ಮತ್ತು ಉತ್ತಮ ಗುಣಮಟ್ಟದ ಸೇವೆಗಳನ್ನು ಜಾರಿಗೊಳಿಸಬೇಕು

10. **ವೈದ್ಯಕೀಯ ಶಿಕ್ಷಣದ ಗುಣಮಟ್ಟ**
**ಹೊಸ ಖಾಸಗಿ ವೈದ್ಯಕೀಯ ಕಾಲೇಜುಗಳನ್ನು ತೆರೆಯುವುದು ನಿಲ್ಲಿಸಬೇಕು** ಮತ್ತು **ಸರ್ಕಾರಿ ಕಾಲೇಜುಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ಸದೃಢಗೊಳಿಸಬೇಕು.**

11. ರಾಜ್ಯದ ಎಲ್ಲಾ ಸರ್ಕಾರಿ, ಅರೆಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ಹೊರಬರುವ **ಹೊಸ ವೈದ್ಯರುಗಳಿಗೆ 2 ವರ್ಷಗಳ ಕಡ್ಡಾಯ ಗ್ರಾಮೀಣ ಸೇವೆಯನ್ನು ಜಾರಿಗೆ ತರಬೇಕು.**

## ಜನಾರೋಗ್ಯ ಆಂದೋಲನ- ಕರ್ನಾಟಕ

ಜನಾರೋಗ್ಯ ಆಂದೋಲನವು ಕರ್ನಾಟಕದ ವಿವಿಧ ಜನಪರ ಸಂಘಟನೆಗಳ ಮತ್ತು ಆರೋಗ್ಯ ಕ್ಷೇತ್ರವನ್ನು ಬಲಗೊಳಿಸುವ ನಿಟ್ಟಿನಲ್ಲಿ ತೊಡಗಿಸಿಕೊಂಡಿರುವ ವಿವಿಧ ಸಾಮಾಜಿಕ ಕ್ಷೇತ್ರಗಳ ಬುದ್ದಿಜೀವಿಗಳು, ಹೋರಾಟಗಾರರ, ಪ್ರಗತಿ ಪರ ಸಂಘಟನೆಗಳ, ಸರ್ಕಾರೇತರ ಸಂಸ್ಥೆಗಳ, ಜನಪರ ಚಳುವಳಿಗಳ ಒಂದು ವೇದಿಕೆ ಆಗಿದೆ. ಅದೇ ರೀತಿ ಜನಾರೋಗ್ಯ ಆಂದೋಲನವು ಅಂತರರಾಷ್ಟ್ರೀಯ ಮಟ್ಟದಲ್ಲಿ ಪೀಪಲ್ಸ್ ಹೆಲ್ತ್ ಮೂವ್‌ಮೆಂಟ್ (PHM) ಆಗಿ, ಅಖಿಲ ಭಾರತ ಮಟ್ಟದಲ್ಲಿ ಜನ ಸ್ವಾಸ್ಥ್ಯ ಅಭಿಯಾನ (JSA) ಆಗಿ ನಮ್ಮ ದೇಶದ ವಿವಿಧ ರಾಜ್ಯಗಳಲ್ಲಿ ಸಮಗ್ರ ಆರೋಗ್ಯಕ್ಕಾಗಿ ಮತ್ತು ಪ್ರಾಥಮಿಕ ಆರೋಗ್ಯ ಪಾಲನೆಯ ತತ್ವಗಳ ಮೇಲೆ ಆಧಾರಿತ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಸ್ಥಾಪಿಸುವ ಹಾಗೂ ಪುನಶ್ಚೇತನಗೊಳಿಸುವ ನಿಟ್ಟಿನಲ್ಲಿ ತೊಡಗಿಸಿಕೊಂಡಿದೆ. ದೇಶದ ಹಾಗೂ ರಾಜ್ಯದ ಪ್ರತಿಯೊಬ್ಬ ಶೋಷಿತ, ಬಡವ, ದಲಿತ, ಗ್ರಾಮೀಣ ಭಾಗದ ಸಮುದಾಯಗಳಿಗೆ ಎಲ್ಲರಿಗೂ ಸಮಗ್ರ ಆರೋಗ್ಯದ ಹಕ್ಕು ದೊರೆಯುವಂತಾಗಬೇಕೆಂಬ ಗುರಿಯೊಂದಿಗೆ ತನ್ನ ಕಾರ್ಯಜಾಲವನ್ನು ವಿಸ್ತರಿಸಿಕೊಂಡಿದೆ. ಪ್ರಸ್ತುತ ಆಂದೋಲನವು ಜಿಲ್ಲಾ ಘಟಕಗಳನ್ನು ಕರ್ನಾಟಕದ 17 ಜಿಲ್ಲೆಗಳಲ್ಲಿ ಹೊಂದಿದೆ. ಈ ಘಟಕಗಳು ಜಿಲ್ಲೆಗಳ ಎಲ್ಲಾ ಪ್ರಗತಿ ಪರ ಸಂಘಟನೆಗಳು, ಸರ್ಕರೇತರ ಸಂಸ್ಥೆಗಳು, ಜನಪರ ಚಳುವಳಿಗಳನ್ನು ಒಳಗೊಂಡಿವೆ.

ಈ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ, 2003-04 ರ ಅವಧಿಯಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದೊಂದಿಗೆ ಸೇರಿ ರಾಷ್ಟ್ರದ ವಿವಿಧ ವಿಭಾಗ ಮಟ್ಟದಲ್ಲಿ ಸಾರ್ವಜನಿಕ ಅಹವಾಲುಗಳನ್ನು ನಡೆಸುವುದರ ಮೂಲಕ, ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಿಂದ ನಡೆದಂಥಹ ಆರೋಗ್ಯ ಹಕ್ಕಿನ ನಿರಾಕರಣೆಗಳನ್ನು ದಾಖಲಿಸಿ, ಮಾನವಹಕ್ಕುಗಳ ಆಯೋಗದ ಮುಂದೆ ವಿವರಿಸಿದೆ. ಮಾನವ ಹಕ್ಕುಗಳ ಆಯೋಗವು ನಮ ಸಮಸ್ಯೆಗಳನ್ನು ಮತ್ತು ಬೇಡಿಕೆಗಳನ್ನು ಸಕಾರಾತ್ಮಕವಾಗಿ ಆಲಿಸಿ, ಭಾರತ ಸರ್ಕಾರಕ್ಕೂ ಹಾಗೂ ರಾಜ್ಯ ಸರ್ಕಾರಗಳಿಗೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಕಟ್ಟುನಿಟ್ಟಿನ ನಿರ್ದೇಶನಗಳನ್ನು ನೀಡಿದೆ. 2004ರ ನಂತರ, ಆಂದೋಲನವು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯ ಪುನಶ್ಚೇತನ ಚಳುವಳಿಯನ್ನು ಹಮ್ಮಿಕೊಂಡಿದ್ದು, ಅದರ ಅಂಗವಾಗಿ ರಾಜ್ಯದ ಜಿಲ್ಲೆಗಳಲ್ಲಿ ಆರೋಗ್ಯ ವ್ಯವಸ್ಥೆಯನ್ನು ಪರಿಶೀಲಿಸಿ, ಕುಂದು ಕೊರತೆಗಳನ್ನು ಆರೋಗ್ಯ ಇಲಾಖೆಯ ಗಮನಕ್ಕೆ ತಂದು, ಅವುಗಳ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಆಗ್ರಹ ಪಡಿಸುವತ್ತಾ ತೊಡಗಿಸಿಕೊಂಡಿದೆ. ಈ ಕಾರ್ಯಾಚರಣೆಯ ಅಂಗವಾಗಿ ಫೆಬ್ರವರಿ 1 2007 ಹಾಗೂ ಅಕ್ಟೋಬರ್ 29, 2007 ರಂದು ರಾಜ್ಯ ಆರೋಗ್ಯ ಹಕ್ಕೊತ್ತಾಯ ದಿನಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ, ಸಮುದಾಯಗಳ ಸಕ್ರಿಯ ಭಾಗವಹಿಸುವಿಕೆಯಲ್ಲಿ, ಏಕಕಾಲದಲ್ಲಿ ನಡೆದಿದೆ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು (NHRC ) 2008-09ರಲ್ಲಿ ಜನಾರೋಗ್ಯ ಆಂದೋಲನದ ಜೊತೆ ( JSA ) ಜಂಟಿಯಾಗಿ ರಾಷ್ಟ್ರಾದ್ಯಂತ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಮತ್ತು ಜನಸಾಮಾನ್ಯರು ಆರೋಗ್ಯದ ಹಕ್ಕು ಪಡೆಯುವ ಬಗ್ಗೆ ಮತ್ತೊಮ್ಮೆ ಸಾರ್ವಜನಿಕ ಅಹವಾಲು ನಡೆಸಲು ಸಜ್ಜಾಗಿದೆ.

**ಜನಾರೋಗ್ಯ ಆಂದೋಲನ - ಕರ್ನಾಟಕ ಕಾರ್ಯಾಲಯ, ಸಮುದಾಯ ಆರೋಗ್ಯ ಕೋಶ ಆವರಣ, (CHC),**
**ನಂ.359, 1ನೇ ಮುಖ್ಯ ರಸ್ತೆ, 1ನೇ ಬಡಾವಣೆ, ಕೋರಮಂಗಲ, ಬೆಂಗಳೂರು - 560 034**
**ದೂರವಾಣಿ : 080-25531518 / 25525372** email : jaaksecretariat@gmail.com website : www.phm-india.org